ಏಕಲವ್ಯ ಪ್ರಕಾಶನ

# ಇಲಿ ಮತ್ತು ಪೆನ್ಸಿಲ್

ಸಚಿತ್ರ ಕತೆ



ವ್ಲಿ. ಸುತೆಯೆವ್ಡ

# ಇಲಿ ಮತ್ತು ಪೆನ್ಸಿಲ್

ಚಿತ್ರ ಮತ್ತು ಕತೆ
**ವ್ಲಿ. ಸುತೆಯೆವ್ಲ**

ಏಕಲವ್ಯ ಪ್ರಕಾಶನ

**ಇಲಿ ಮತ್ತು ಪೆನ್ಸಿಲ್**

**Ili Mattu Pencil**

A pictures story

From *STORIES AND PICTURES*
Progress Publishers, MOSCOW
Text and illustrations: V. Suteyev
Kannada Translation: Prabhakar Nanawaty

This Kannada translation is supported by the Parag initiative of Tata Trusts.

May 2018 / 1000 copies
Paper: 100 gsm Maplitho and 210 gsm Paper board (Cover)
ISBN: 978-93-85236-59-4
Price: ₹ 49.00

Published by:
**EKLAVYA**
E-10, Shankar Nagar BDA Colony
Shivaji Nagar, Bhopal- 462 016
Phone: +91 755 255 0976, 267 1017
www.eklavya.in / books@eklavya.in

Printed at: R.K. Secuprints P Ltd., Bhopal, Phone +91 755  2687 589





# ಇಲಿ ಮತ್ತು ಪೆನ್ಸಿಲ್



ಒಂದು ದಿನ ಒಂದು ಇಲಿಮರಿಯು ತಿನ್ನಲಿಕ್ಕೆಂದು ಸುತ್ತಮುತ್ತಲು ಹುಡುಕುತ್ತಲಿತ್ತು. ಆಗ ಅದಕ್ಕೆ ಒಂದು ಪೆನ್ಸಿಲ್ ದೊರೆಯಿತು.



ಇಲಿಯು ಪೆನ್ಸಿಲನ್ನು ತೆಗೆದುಕೊಂಡು ತನ್ನ ಬಿಲದ ಒಳಗೆ ಓಡಿ ಹೋಯಿತು.
“ನನಗೆ ಹೋಗಲಿಕ್ಕೆ ಬಿಡು!” ಪೆನ್ಸಿಲ್ ಕನಿಕರದಿಂದ ಕೇಳಿಕೊಂಡಿತು.
“ನಿನಗೆ ನನ್ನಿಂದ ಏನು ಬೇಕು? ನಾನು ಬರಿ ಒಂದು ಕಟ್ಟಿಗೆಯ ತುಂಡು.
ನಿನಗೆ ಅದನ್ನು ತಿನ್ನಲು ಶಕ್ಯವಿಲ್ಲ.”




“ನಾನು ನಿನ್ನನ್ನು ಕಚ್ಚಿ ತಿನ್ನುವೆ!” ಇಲಿಯು ಬೆದರಿಸಿ ಹೇಳಿತು.
“ನನಗೆ ಕಚ್ಚಲು ಏನಾದರೂ ಬೇಕೆ ಬೇಕು. ಅದರಿಂದ ನನ್ನ ಹಲ್ಲುಗಳು ಚೂಪಾಗಿ ಇರುತ್ತವೆ. !”
ಇಲಿಯು ಪೆನ್ಸಿಲನ್ನು ಜೋರಾಗಿ ಕಚ್ಚಿತು.



“ನೀನು ನನಗೆ ನೋವು ಕೊಡುತ್ತಿರುವಿ!” ಪೆನ್ಸಿಲ್ ಅಳುಮೋರೆಯಿಂದ ಹೇಳತೊಡಗಿತು.




“ನಾನು ಒಂದು
ಕೊನೆಯ ಚಿತ್ರವನ್ನು
ತೆಗೆಯುವೆ. ಆ ಮೇಲೆ
ನಿನಗೆ ಏನು ಬೇಕೋ
ಅದನ್ನು ಮಾಡು!”




“ಸರಿ, ನೀನು ಯಾವದಾದರೂ ಒಂದು ಚಿತ್ರ ತೆಗೆ. ಆ ಮೇಲೆ ನಿನ್ನನ್ನು ಕತ್ತರಿಸಿ ತುಂಡು ಮಾಡಿ ತಿನ್ನುವೆ.!” ಇಲಿಯು ಹೇಳಿತು.






ಪೆನ್ಸಿಲ್ ನಿಟ್ಟುಸಿರು ಬಿಡುತ್ತ ಒಂದು ದೊಡ್ಡ ವರ್ತುಳದ ಚಿತ್ರವನ್ನು ಬರೆಯಿತು.
“ಇದೇನು.. Cheese ಚೀಜವೇ?” ಇಲಿ ಕೇಳಿತು.



“ಇದಕ್ಕೆ ಚೇಸು ಎಂದು ಅನ್ನಬಹುದು. ಹೀಗೆ ಅನ್ನುತ್ತ ಆ ದೊಡ್ಡ ವರ್ತುಳದಲ್ಲಿ ಇನ್ನೆರಡು ಚಿಕ್ಕ ವೃತ್ತಗಳನ್ನು ಅದು ಬರೆಯಿತು.

“ಅಹುದು ಇದು ಚೀಸಿನಂತೆ ಕಾಣುತ್ತದೆ. ನೋಡಲ್ಲಿ, ಅದಕ್ಕೆ ಛಿದ್ರಗಳಿವೆ.” ಇಲಿ ಆಚ್ಚರಿಯಿಂದ ಹೇಳತೊಡಗಿತು.



“ಚೀಸುಗಳಲ್ಲಿಯ ಛಿದ್ರವೆಂದು ಅವುಗಳನ್ನು ನಾವು ಕರೆಯುವ.” ಹೀಗೆ ಅನ್ನುತ್ತ ಆ ದೊಡ್ಡ ವರ್ತುಳದ ಕೆಳಗೆ ಇನ್ನೊಂದು ದೊಡ್ಡ ವರ್ತುಳವನ್ನು ಅದು ತೆಗೆಯಿತು.


“ಇದು ಕಿತ್ತಳೆ,”
ಕಿರುಚು ದನಿಯಲ್ಲಿ
ಇಲಿ ಒದರಿತು.




“ಇದಕ್ಕೆ ಕಿತ್ತಳೆ ಅನ್ನುವ,” ಹೀಗೆ ಅನ್ನುತ್ತ ಕೆಲ ವಕ್ರ ರೇಷೆಗಳನ್ನು ಎರಡನೇ ವರ್ತುಳದ ಹತ್ತಿರ ಪೆನ್ಸಿಲ್ ಬರೆಯಿತು.

"ಏನಿದು, ಸೌತೆಕಾಯಿಯೇ?" ತುಟಿಗಳನ್ನು ಸವರುತ್ತ, ಜೊಲ್ಲು ಸೋರಿಸುತ್ತ ಇಲಿ ನುಡಿಯಿತು.


"ನೀನು ಅವಸರ ಮಾಡು. ನನ್ನ ಹಲ್ಲುಗಳು ಅವುಗಳನ್ನು ತಿನ್ನಲು ಆತುರ ಪಡೆಯುತ್ತಲಿವೆ.!"



ಮೇಲಿನ ವರ್ತುಳದ ಮೇಲ್ಬದಿಗೆ ಎರಡು
ತ್ರಿಕೋನಗಳನ್ನು ಪೆನ್ಸಿಲ್ ಚಿತ್ರಿಸಿತು.




"ಓಹ, ಓಹ,!" ಇಲಿ ಒಮ್ಮೆಲೆ ಚೀರತೊಡಗಿತು. "ನೀನಿಗ ಇಲ್ಲಿ
ಬೆಕ್ಕನ್ನು ಚಿತ್ರಿಸಿರುವೆ. ಮುಂದಿನದನ್ನು ನಿಲ್ಲಿಸಿ ಬಿಡು.!"



ಆದರೆ ಪೆನ್ಸಿಲ್ ಚಿತ್ರಿಸುವದನ್ನು ನಿಲ್ಲಿಸಲಿಲ್ಲ. ಆ ಮೇಲಿನ ವರ್ತುಳದಲ್ಲಿ ಮೀಸೆ ಮತ್ತು ಬಾಯಿಯನ್ನು ಚಿತ್ರಿಸತೊಡಗಿತು.

ಇಲಿ ಹೆದರಿ ನಡುಗತೊಡಗಿತು. " ಇದು ನಿಜವಾಗಿಯೇ  ಬೆಕ್ಕು!.
ನನ್ನನ್ನು ಕಾಪಾಡಿ!"  ಎಂದು ಕೂಗಾಡತೊಡಗಿತು.



ಈಗ ನೀವು ಕೂಡ ಇಲಿಗಳನ್ನು ಅಂಜಿಸಿ ಓಡಿಸುವ ನಿಜವಾದ
ಬೆಕ್ಕಿನಂತೆ ಕಾಣುವ  ಚಿತ್ರವನ್ನು ಬರೆಯಬಹುದು.!

ಏಕಲವ್ಯ ಪ್ರಕಾಶನ

parag
AN INITIATIVE OF
TATA TRUSTS

Price: ₹ 49.00
9 789385 236594